# ಮಗ ತಂದ ಸೌಭಾಗ್ಯ



ವಿಜಯಪಥ್ ಸಿಂಘಾನಿಯ ಎನ್ನುವ ಹೆಸರು ಈಗಿನ ಪೀಳಿಗೆಗೆ ಅಷ್ಟು ಪರಿಚಿತವೇನೂ ಅಲ್ಲ. ಆದರೆ ಕಳೆದ ಶತಮಾನದ 90ರ ದಶಕದಲ್ಲಿ ವಿಜಯಪಥ್ ಸಿಂಘಾನಿಯಾ ಎಂದರೆ ಭಾರತದ ಉದ್ಯಮಲೋಕದ ಸೂಪರ್‌ಸ್ಟಾರ್ ಆಗಿ ಬದುಕಿದವರು. ಆಗ ದೇಶದ ಎರಡು ಅತಿದೊಡ್ಡ ಬಟ್ಟೆ ಬ್ರ್ಯಾಂಡ್‌ಗಳೆಂದರೆ – ರೇಮಂಡ್ ಸೂಟಿಂಗ್ಸ್ ಮತ್ತು ವಿಮಲ್. ಅದರಲ್ಲೂ ರೇಮಂಡ್ ಪ್ರತಿಷ್ಠಿತ ಹೆಸರು. ಯಾರಾದರೂ ರೇಮಂಡ್‌ನ ಒಂದು ಜೊತೆ ಬಟ್ಟೆ ಹೊಲಿಸಿಕೊಳ್ಳುವುದೆಂದರೆ ಆಗ ಸಮಾಜದ ಪ್ರತಿಷ್ಠಿತ ವರ್ಗದಲ್ಲಿ ಸೇರಿದಂತೆಯೇ. ಆ ಬಟ್ಟೆ ಕಂಪೆನಿಯ ಟ್ಯಾಗ್‌ಲೈನ್ ಇದ್ದುದು 'ದಿ ಕಂಪ್ಲೀಟ್ ಮ್ಯಾನ್' ಎಂದು. ವಿಜಯಪಥ್ ಸಿಂಘಾನಿಯಾ ರೇಮಂಡ್ ಉದ್ಯಮ ಗುಂಪನ್ನು ಸ್ಥಾಪಿಸಿ ಭಾರತದ ಅತ್ಯಂತ ಪ್ರತಿಷ್ಠಿತ ಬ್ರ್ಯಾಂಡ್ ಆಗಿ ಬೆಳೆಸಿದ್ದು ಒಂದು ದೊಡ್ಡ ಸಾಹಸಗಾಥೆ. ಸಾಮಾನ್ಯ ನೌಕರನಿಂದ ಹಿಡಿದು ಅರಸೊತ್ತಿಗೆಯ ಮಹಾರಾಜರವರೆಗೆ ಆಗ ರೇಮಂಡ್ ಬಟ್ಟೆ ಜನಪ್ರಿಯವಾಗಿತ್ತು.

ಆತ ಉದ್ಯಮಿ ಮಾತ್ರವಲ್ಲ, ಆಕಾಶದಲ್ಲಿ ಹಾರಾಡುವುದೆಂದರೂ ಬಹುದೊಡ್ಡ ಪ್ರೀತಿ. ಆಕಾಶಯಾನದ ಹಲವು ವಿಶ್ವದಾಖಲೆಗಳನ್ನು ಸಾಧಿಸಿದ್ದೂ ಈ ಉದ್ಯಮಿಯನ್ನು ದೇಶದ ಬೇರೆಲ್ಲ ಉದ್ಯಮಿಗಳಿಂದ ಭಿನ್ನವಾಗಿಸಿತು. 90ರ ದಶಕದಲ್ಲಿ ವಿಜಯಪಥ್ ಸಿಂಘಾನಿಯಾ ಮಾಧ್ಯಮಗಳ ಕಣ್ಮಣಿಯೂ ಆಗಿದ್ದರು. ಸ್ವತಃ ಇಂಗ್ಲಿಷ್ ದಿನಪತ್ರಿಕೆಯೊಂದನ್ನೂ ಕೆಲವು ಕಾಲ ನಡೆಸಿದ್ದರು.

ಸಿಂಘಾನಿಯಾಗೆ ಈಗ 80 ವರ್ಷ. ಈಗಲೂ ಒಂದು ಸುದ್ದಿ ಮಾಡಿದ್ದಾರೆ. ಮಾಡಿದ್ದಾರೆ ಎನ್ನುವುದಕ್ಕಿಂತ ಆಗಿದ್ದಾರೆ ಎನ್ನುವುದು ಒಳ್ಳೆಯದು. ಏಕೆಂದರೆ ಇದು ಅವರ ಪಾಲಿಗೆ ಶುಭ ಸುದ್ದಿಯಲ್ಲ. ಅವರನ್ನು ರೇಮಂಡ್ ಉದ್ಯಮ ಗುಂಪಿನ ಚೇರ್‌ಮನ್ ಎಮಿರಿಟಸ್ ಹುದ್ದೆಯಿಂದ ಕಿತ್ತು ಹಾಕಿರುವುದಾಗಿ ಮಗ ಗೌತಮ್ ಸಿಂಘಾನಿಯಾ ಪ್ರಕಟಿಸಿದ್ದಾರೆ. ಆತ ಈಗ ಕಂಪೆನಿಯ ಚೇರ್‌ಮನ್ ಮತ್ತು ಎಂಡಿ. ಈ ಮೂಲಕ ಅಪ್ಪ–ಮಗನ ನಡುವಣ ಜಗಳ ಮತ್ತೊಮ್ಮೆ ಬೀದಿಗೆ ಬಂದಿದೆ.

ಈ ಜಗಳಕ್ಕೂ ಒಂದು ಹಿನ್ನೆಲೆಯಿದೆ. 2015ರವರೆಗೆ ತಾವೇ ರೇಮಂಡ್ ಉದ್ಯಮ ಸಾಮ್ರಾಜ್ಯದ ಅಧಿಪತಿಯಾಗಿದ್ದರು ವಿಜಯಪಥ್. ಅದು 13000 ಕೋಟಿ ರೂಪಾಯಿ ಮೌಲ್ಯದ ಸಾಮ್ರಾಜ್ಯ. ಆ ಕಾಲಕ್ಕೆ ಅದೊಂದು ದೊಡ್ಡ ಮೌಲ್ಯವೇ. ಸಿಂಘಾನಿಯಾ ಅವರ 'ಜೆಕೆ ಹೌಸ್' ಎನ್ನುವುದು ಈಗಿನ ಭಾರತದ ನಂಬರ್ ಒನ್ ಉದ್ಯಮಿ ಮುಖೇಶ್ ಅಂಬಾನಿಯವರ ಮನೆಗಿಂತಲೂ ದೊಡ್ಡದಾಗಿತ್ತು. ಸಿಂಘಾನಿಯಾರ ಇಬ್ಬರು ಮಕ್ಕಳಲ್ಲಿ ಮಧುಪತಿ ದೊಡ್ಡವನು. ಗೌತಮ್ ಎರಡನೆಯವನು. ಇಬ್ಬರ ಮಧ್ಯೆ ಸದಾ ಜಗಳ. ಒಮ್ಮೆ ಸಿಟ್ಟಿನ ಭರದಲ್ಲಿ ಗೌತಮ್ ಅಣ್ಣನನ್ನು ಕೊಲೆ ಮಾಡುವುದಾಗಿ ಹೇಳಿದ. ಸಿಟ್ಟಿಗೆದ್ದ ವಿಜಯಪಥ್ ಕಿರಿಮಗ ಗೌತಮನನ್ನು ಮನೆಯಿಂದ ಹೊರ ಹಾಕಿದರು. ಸಿಟ್ಟಿನಿಂದ ಹೊರಹೋದ ಗೌತಮ್, ತಕ್ಷಣವೇ ವಾಪಸ್ ಬಂದು ತಂದೆಯ ಕ್ಷಮೆ ಯಾಚಿಸಿದ. ಕೂಡುಕುಟುಂಬ ಮುಂದುವರಿಯಿತು.

ಆದರೆ ಮೊದಲ ಮಗ ಅಪ್ಪನ ನಿರೀಕ್ಷೆಯಂತೆ ಇರಲಿಲ್ಲ. ಉದ್ಯಮದ ಕಡೆಗೆ ಆತನಿಗೆ ಆಸಕ್ತಿ ಇರಲಿಲ್ಲ. ಸದಾ ಕಂಪ್ಯೂಟರ್ ಗೇಮ್‌ನಲ್ಲಿ ಮಗ್ನ. ರೋಡ್‌ರೋಲರ್, ಬುಲ್‌ಡೋಜರ್ ಓಡಿಸುವುದೆಂದರೆ ಖುಷಿ. ಉದ್ಯಮವನ್ನು ಮುನ್ನಡೆಸುವುದರಲ್ಲಿ ಆತನಿಗೆ ಆಸಕ್ತಿ ಇರಲಿಲ್ಲ. ಹಾಗಾಗಿ 2015ರಲ್ಲಿ ವಿಜಯಪಥ್ ತಮ್ಮ ಉದ್ಯಮ, ಆಸ್ತಿಪಾಸ್ತಿಗಳನ್ನೆಲ್ಲ ಎರಡನೆ ಮಗ ಗೌತಮ್ ಹೆಸರಿಗೆ ಬರೆದುಕೊಟ್ಟರು. ಅಲ್ಲಿಯವರೆಗೆ ಎಲ್ಲವೂ ಚೆನ್ನಾಗಿತ್ತು.

ಆ ಬಳಿಕದ್ದು ನಾಟಕೀಯ ಘಟನೆ. ಗೌತಮ್ ಅಪ್ಪನನ್ನು ಮನೆಯಿಂದ ಹೊರಗೆ ಹಾಕಿದ. ಕಳೆದ ಮೂರು ವರ್ಷಗಳಿಂದ ವಿಜಯಪಥ್ ಸಿಂಘಾನಿಯಾ ದಕ್ಷಿಣ ಮುಂಬೈಯ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದಾರೆ. ಪತ್ರಿಕಾ ವರದಿಗಳ ಪ್ರಕಾರ, ಈಗ ಅವರದ್ದು 'ಕೈಯಿಂದ ಬಾಯಿಗೆ ಎಷ್ಟು ಬೇಕೋ ಅಷ್ಟು' ಎನ್ನುವಂತಹ ಕಷ್ಟದ ಬದುಕು. ಹೀಗೆಂದು ಕಳೆದ ವರ್ಷವೇ ಸುದ್ದಿಯಾಗಿತ್ತು. ಆದರೂ ಅವರು ರೇಮಂಡ್ ಕಂಪೆನಿಯ ಗೌರವ ಚೇರ್‌ಮನ್ ಆಗಿ ಉಳಿದುಕೊಂಡಿದ್ದರು. ಈಗ ಆ ಹುದ್ದೆಯಿಂದಲೂ ವಜಾ ಮಾಡಿರುವ ಸುದ್ದಿ ಬಂದಿದೆ. ಸದ್ಯಕ್ಕಂತೂ ಅಪ್ಪ–ಮಗನ ಆಸ್ತಿ ಜಗಳ ಹೈಕೋರ್ಟ್‌ನಲ್ಲಿದೆ.

ವಿಜಯಪಥ್ ಸಿಂಘಾನಿಯಾ ಕೇವಲ ರೇಮಂಡ್ಸ್ ಉದ್ಯಮದ ಸ್ಥಾಪಕರಾಗಿ ಹೆಸರು ಮಾಡಿದ್ದು ಮಾತ್ರವಲ್ಲ, ತಮ್ಮ ಆಕಾಶಯಾನದ ಸಾಹಸದಿಂದಲೂ ಹೆಸರು ಮಾಡಿದವರು. 1988ರಲ್ಲಿ ಮೈಕ್ರೊಲೈಟ್ ಏರ್‌ಕ್ರಾಫ್ಟ್ ಒಂದರಲ್ಲಿ ಭಾರತದಿಂದ ಹೊರಟು ಬ್ರಿಟನ್ನಿಗೆ ತಲುಪಿದ್ದು ದೊಡ್ಡ ಸಾಹಸಯಾನ. 34,000 ಕಿ.ಮೀ.ಗಳ ಈ ಹಾರಾಟವನ್ನು ಆತ 24 ದಿನಗಳಲ್ಲಿ ತಲುಪಿದ್ದು ದೊಡ್ಡ ಸುದ್ದಿಯಾಗಿತ್ತು. 1998ರಲ್ಲಿ 'ಫೆಡರೇಷನ್ ಏರೊನಾಟಿಕ್ ಇಂಟರ್‌ನ್ಯಾಷನಲ್'ನ ಏರ್ ರೇಸ್‌ನಲ್ಲಿ ಅವರು ಚಿನ್ನದ ಪದಕ ಗಳಿಸಿದ್ದರು. ಭಾರತೀಯ ವಾಯುಪಡೆ ಅವರಿಗೆ ಗೌರವ ಏರ್‌ಕಮಾಂಡರ್ ಹುದ್ದೆ ನೀಡಿತ್ತು. 2001ರಲ್ಲಿ ತನ್ನ 67ನೇ ವಯಸ್ಸಿನಲ್ಲಿ ಬಿಸಿಗಾಳಿಯ ಬಲೂನ್‌ನಲ್ಲಿ ಅತ್ಯಧಿಕ ಎತ್ತರಕ್ಕೆ ಏರಿ ಅವರು ವಿಶ್ವದಾಖಲೆ ನಿರ್ಮಿಸಿದ್ದರು. 2005ರಲ್ಲಿ ರಾಯಲ್ ಏರೋ ಕ್ಲಬ್ ಅವರಿಗೆ ಚಿನ್ನದ ಪದಕ ನೀಡಿ ಗೌರವಿಸಿತು. ಮರುವರ್ಷ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿತು.

'ಎನ್ ಏಂಜಲ್ ಇನ್ ಅ ಕಾಕ್‌ಪಿಟ್' ಎನ್ನುವ ತಮ್ಮ ಪುಸ್ತಕದಲ್ಲಿ ಮೈಕ್ರೊಲೈಟ್ ವಿಮಾನ ಯಾನದ ರೋಮಾಂಚಕ ಅನುಭವಗಳನ್ನು ಸಿಂಘಾನಿಯಾ ದಾಖಲಿಸಿದ್ದಾರೆ. ಆದರೆ ಈ ದಾಖಲೆಗಳೆಲ್ಲವೂ ಮರೆತುಹೋಗುವಂತೆ ಈಗ ದಯನೀಯ ಬದುಕು ಸವೆಸುತ್ತಿದ್ದಾರೆ. ಟೀವಿ ಲೈವ್‌ನಲ್ಲಿ ಕುಳಿತು 'ನನ್ನ ಮಗ ಗೌತಮನಿಗೆ ನನ್ನದೊಂದು ಸಲಹೆಯಿದೆ. ಆತ ತನ್ನ ಮಕ್ಕಳನ್ನು ಸರಿಯಾದ ದಾರಿಯಲ್ಲಿ ಬೆಳೆಸಲಿ. ಇಲ್ಲವಾದಲ್ಲಿ ಅವನ ಮಕ್ಕಳೂ ಅವನನ್ನು ನನ್ನಂತೆಯೇ ಬೀದಿಪಾಲು ಮಾಡಿಯಾರು' ಎಂದು ವಿಜಯ್‌ಪಥ್ ಸಿಂಘಾನಿಯಾ ಹೇಳಿದ್ದು ಈಗಲೂ ನೆನಪಾಗುತ್ತಿದೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65